‘ನಾವು ದುಡುಕಿ ಬಿಟ್ಟೆವು ಅಲ್ವಾ, ಸಂತೋಷ್? ಸ್ವಲ್ಪ ದಿನ ತಡೆದು ಬರಬಹುದಿತ್ತೇನೋ?’ ಎನ್ನುವಾಗ ಮನೀಷನ ಧ್ವನಿ ತೀರಾ ಕ್ಷೀಣವಾಗಿತ್ತು.

ದಟ್ಟಾರಣ್ಯ, ದೃಷ್ಟಿಗೆ ನಿಲುಕದ ಎತ್ತರಕ್ಕೆ ಬೆಳೆದ ಬೃಹದಾಕಾರದ ವೃಕ್ಷಗಳು, ಅವುಗಳ ಅಡಿಯಲ್ಲಿ ಪೊದೆ ಪೊದೆಯಾಗಿ ಬೆಳೆದ ಸಣ್ಣಪುಟ್ಟ ಸಸ್ಯಗಳು, ಬಿದಿರು, ಬೆತ್ತ ಮುಂತಾಗಿ ಗುರುತಿಸಲಾಗದ ಬಳ್ಳಿಗಳು ಸುತ್ತಲಿನ ಮರಗಳನ್ನು ತಬ್ಬಿಕೊಂಡು ಹಬ್ಬಿ ಆ ಕಾಡನ್ನು ಸಸ್ಯ ಸುರಂಗವನ್ನಾಗಿಸಿದ್ದವು. ಆಕಾಶದಲ್ಲಿ ಚಾದರದಂತೆ ಹಾಸಿಕೊಂಡ ಕಪ್ಪು ಮೋಡಗಳು, ಬೋರೆಂದು ನೆಲ, ವೃಕ್ಷಗಳನ್ನು ನಡುಗಿಸುವ ಗಾಳಿ, ಅಷ್ಟೇನೂ ರಭಸವಿಲ್ಲದಿದ್ದರೂ ಬಿಡುವು ಕೊಡದೇ ಸುರಿಯುವ ಮಳೆಯ ಜೊತೆಗೆ ನೆಲದಿಂದ ಹೊಮ್ಮುವ ಉಗಿ ಹೊಗೆಯಂತೆ ಕವಿದುಕೊಂಡಿತ್ತು. ಹಗಲೋ, ಸಂಜೆಯೋ ತಿಳಿಯದ ಮಬ್ಬುಗತ್ತಲಿನಿಂದ ಮಾರು ದೂರವೂ ಗೋಚರಿಸದ ಸ್ಥಿತಿ. ಇವೆಲ್ಲದರ ನಡುವೆ ಮನೀಷ ಕಂಗಾಲಾಗಿದ್ದ. ಅವನಿಗೆ ಹೋಲಿಸಿದರೆ ಸಂತೋಷ ಸಾಕಷ್ಟು ಧೈರ್ಯದಿಂದಿದ್ದ.

‘ಹೆದರಬೇಡ, ಎಲ್ಲಾದರೂ ದಾರಿ ಸಿಗುತ್ತದೆ. ಹುಡುಕೋಣ’ ಎನ್ನುವಷ್ಟು ಕಸುವನ್ನು ಉಳಿಸಿಕೊಂಡಿದ್ದ ಸಂತೋಷ. ಮಸುಕು ಬೆಳಕು ನಿಧಾನಕ್ಕೆ ಕುಂದುತ್ತ, ಕತ್ತಲು ಕವಿದುಕೊಳ್ಳುತ್ತಿದ್ದ ಅಬ್ಬರದ ಮಳೆ ಗಾಳಿಯಲ್ಲಿ ಕೆಸರು ನೆಲದಲ್ಲಿ ಜಾರುತ್ತ, ಅಪರಿಚಿತವಾದ ಆ ಕಾಡಿನಲ್ಲಿ ಅವರಿಬ್ಬರೂ ದಿಕ್ಕು ತಪ್ಪಿಸಿಕೊಂಡು ಯಾವುದಾದರೂ ಸುರಕ್ಷಿತ ಸ್ಥಳವನ್ನು ತಲುಪಲು ಒದ್ದಾಡುತ್ತಿದ್ದರು.

ನಿಂತರೆ ಕಾಲಿಗೆ ಮುತ್ತಿಕೊಳ್ಳುವ ನೂರಾರು ಉಂಬಳಗಳು, ನೆಲದಲ್ಲಿ ಮಾತ್ರವಲ್ಲದೇ ಸಣ್ಣಗಿಡಗಳಿಂದ ಮೈ ಮೇಲೆ ನೆಗೆಯುವ ಅವುಗಳಿಂದ ರಕ್ಷಿಸಿಕೊಳ್ಳುವುದೇ ಹರಸಾಹಸವೆನಿಸುತ್ತಿತ್ತು. ಎದುರಾಗುವ ಗಿಡ, ಬಳ್ಳಿಗಳನ್ನು ಬದಿಗೆ ತಳ್ಳಿ, ಅನಿವಾರ್ಯವಾಗಿ ಹೋದದ್ದೇ ದಾರಿ ಎನ್ನುವಂತೆ ಸಾಗುತ್ತ ಆ ಗುಡ್ಡದ ಅಂಚಿನವರೆಗೆ ಬಂದು ತಲುಪಿದ್ದರು.

ಅಲ್ಲಿಂದ ಸುತ್ತ ನೋಡಿದಾಗ ಗುಡ್ಡದ ಆ ಪಕ್ಕದ ಇಳಿಜಾರಿನಾಚೆ ಒಂದಿಷ್ಟು ಬಯಲು ಆ ಮಬ್ಬಿನಲ್ಲೂ ಗೋಚರಿಸಿತು. ಅದರಾಚೆ ಮತ್ತೆ ಮಹಮ್ಮೇರು ಗುಡ್ಡಗಳ ಸಾಲು. ಅದರ ನಡುವೆ ಉಳಿದವಕ್ಕಿಂತ ಭಿನ್ನವಾಗಿ, ಎತ್ತರವಾಗಿ, ಕೊಂಚ ಓರೆಯಾಗಿ ತುದಿಯನ್ನು ಚಾಚಿಕೊಂಡ ಎತ್ತರದ ಪರ್ವತ. ಸಂತೋಷ ತನ್ನ ಬಳಿಯಿದ್ದ ಬೈನಾಕ್ಯೂಲರ್ ತೆಗೆದು ನೋಡಿದ. ಲೆನ್ಸಿಗೆ ಮಂಜು ತಗುಲಿ, ಅದರ ಹನಿಗಳು ಬೃಹದಾಕಾರವಾಗಿ ತೋರಿದವೇ ಹೊರತು ಮುಂದಿನ ದೃಶ್ಯ ಗೋಚರಿಸಲಿಲ್ಲ. ತಾವು ನಿಂತಿದ್ದ ಗುಡ್ಡದ ತುದಿಯಲ್ಲಿನ ಬಂಡೆಗಲ್ಲೊಂದಕ್ಕೆ ಮನೀಷ ಒರಗಿ ಕುಸಿದು ಕೂತಿದ್ದ. ಆಯಾಸದ ಜೊತೆಗೆ ಮುಂದೆ ತಮ್ಮ ಸ್ಥಿತಿ ಏನು? ಎನ್ನುವ ಊಹೆ ಅವನನ್ನು ಇನ್ನಷ್ಟು ನಿತ್ರಾಣಗೊಳಿಸಿತ್ತು. ಏದುಸಿರು ಬಿಡುತ್ತ ಕುಳಿತವನು ಸುಧಾರಿಸಿಕೊಳ್ಳಲಿ ಎಂದು ಕಾಯುತ್ತಿದ್ದರೆ ಕತ್ತಲು ಕವಿದುಬಿಡುತ್ತದೆ. ಏನಾದರಾಗಲಿ, ಅವನನ್ನು ಎಬ್ಬಿಸಿ, ಕೆಳಗಿನ ಪ್ರಪಾತದಲ್ಲಿ ಬಯಲಿನಂತೆ ಕಾಣುವ ಜಾಗಕ್ಕೆ ಹೋಗಿ ಮುಟ್ಟೋಣ ಎಂದು ಮನೀಷನನ್ನು ಎಬ್ಬಿಸಿದ. ಅವನಿಗೆ ಒಂದಿಷ್ಟು ಧೈರ್ಯದ ಮಾತುಗಳನ್ನು ಸಂತೋಷ ಹೇಳಿದ. ಅವರಿಬ್ಬರೂ ಆ ಇಳಿಜಾರಿನಲ್ಲಿ ನಿಧಾನಕ್ಕೆ ಇಳಿಯತೊಡಗಿದರು.

‘ಮನೀಷ್, ಕಾಡಿನ ಗುಡ್ಡ ಏರುವುದು ಸುಲಭ. ಇಳಿಯುವುದು ತುಂಬಾ ಕಷ್ಟ ಮತ್ತು ಅಪಾಯ ಎನ್ನುವುದು ಕಾಡಿನಲ್ಲಿ ಬದುಕುವವರ ಅನುಭವದ ಮಾತು. ಅದಕ್ಕೆ ಇಲ್ಲಿ ಬದುಕುವವರು ಹಂದಿ, ಆನೆ ಮುಂತಾದವು ಅಟ್ಟಿಸಿಕೊಂಡು ಬಂದಾಗ ಗುಡ್ಡ ಏರುವುದಿಲ್ಲ, ಇಳಿಜಾರಿನಲ್ಲಿ ಜಾರುತ್ತಾರೆ’ ಎಂದೆಲ್ಲ ಮನೀಷನಲ್ಲಿ ಉತ್ಸಾಹ ತುಂಬುವ ಮಾತನಾಡುತ್ತಿದ್ದ.